ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ಸಂಖ್ಯೆ: ವಾತೆಅಆ(ಲೆಕ್ಕಪರಿಶೋಧನೆ)/ಪಿಎ/ಸಿಆರ್-83/2018-19.

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ,
ಬೆಂಗಳೂರು, ದಿನಾಂಕ 18.12.2018.

**ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರ ನಡಾವಳಿಗಳು**

**ಪ್ರಸ್ತುತ :** **ಎಂ.ಎಸ್. ಶ್ರೀಕರ್, ಭಾ.ಆ.ಸೇ.,**
ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು

ವಿಷಯ : ಸರ್ಕಾರವು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸ್ಥಾಪಿಸಿರುವ 'ಗೌಪ್ಯ ಸೇವಾ ನಿಧಿ' ಯನ್ನು ಕಾರ್ಯಗತಗೊಳಿಸಲು ಮಾರ್ಗಸೂಚಿಗಳು.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ : ಆಇ 114 ವಾತೆಇ 2018, ದಿನಾಂಕ : 22.11.2018.

***

**<u>ಪ್ರಸ್ತಾವನೆ</u>** :

ವಾಣಿಜ್ಯ ತೆರಿಗೆಗಳ ಇಲಾಖೆಯ ಜಾರಿ ಮತ್ತು ಜಾಗೃತಿ ವಿಭಾಗಗಳಲ್ಲಿ ಜಾರಿ ಮತ್ತು ಜಾಗೃತಿ ಕಾರ್ಯಗಳನ್ನು ನಿರ್ವಹಿಸುವ ಸಮಯದಲ್ಲಿ ಅನೀರೀಕ್ಷಿತವಾಗಿ ಉದ್ಭವಿಸುವ ವೆಚ್ಚಗಳಾದ ಪ್ರಯಾಣ ವೆಚ್ಚ, ಲೇಖನ ಸಾಮಗ್ರಿಗಳ ಖರೀದಿ, ಖಾಸಗಿ ವಾಹನಗಳನ್ನು ಬಾಡಿಗೆಯ ಮೇಲೆ ಪಡೆಯಲು ಹಾಗೂ ಇತರೆ ಸಂಬಂಧಿತ ವೆಚ್ಚಗಳನ್ನು ಭರಿಸಲು ಹಾಗೂ ತೆರಿಗೆ ವಂಚನೆಯ ಬಗ್ಗೆ ಸುಳಿವು ನೀಡುವ ಮಾಹಿತಿದಾರರಿಗೆ ಬಹುಮಾನ ನೀಡಲು ತಗುಲುವ ವೆಚ್ಚವನ್ನು ಭರಿಸಲು ಸರ್ಕಾರವು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ 'ಗೌಪ್ಯ ಸೇವಾ ನಿಧಿ'(Secret Services Fund) ಯನ್ನು ಉಲ್ಲೇಖಿತ ಆದೇಶದ ಮೂಲಕ ಸ್ಥಾಪಿಸಿರುತ್ತದೆ.

ಮುಂದುವರೆದು, ಈ ನಿಧಿಯಿಂದ ವೆಚ್ಚ ಮಾಡುವುದನ್ನು ಕಾರ್ಯಗತಗೊಳಿಸಲು ಹಾಗೂ ತೆರಿಗೆ ವಂಚನೆಯನ್ನು ಪತ್ತೆ ಹಚ್ಚಲು ಸಹಕಾರಿಯಾಗುವಂತೆ ಜಾರಿ ಮತ್ತು ಜಾಗೃತಿ ವಿಭಾಗಗಳಿಗೆ ವಿಶ್ವಾಸಾರ್ಹ ಮಾಹಿತಿಯನ್ನು ಒದಗಿಸುವ ಮಾಹಿತಿದಾರರಿಗೆ ಬಹುಮಾನ ನೀಡುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ವಿಸ್ತೃತವಾದ ಮಾರ್ಗಸೂಚಿಗಳನ್ನೂ ಸಹ ನೀಡಿರುತ್ತದೆ. ಸರ್ಕಾರವು 2018-19ರ ಆರ್ಥಿಕ ವರ್ಷದಲ್ಲಿ ಈ ಉದ್ದೇಶಕ್ಕಾಗಿ ರೂ.15,00,000-00 ಗಳನ್ನು ಒದಗಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರ ನೀಡಿರುತ್ತದೆ. ಈ ರೀತಿ ಸರ್ಕಾರವು ಅಧಿಕಾರ ನೀಡಿರುವ ಮೊತ್ತವನ್ನು ಸಂಬಂಧಿಸಿದ ಜಾರಿ ಮತ್ತು ಜಾಗೃತಿ ವಿಭಾಗಗಳ ಅಪರ ಆಯುಕ್ತರು ಮತ್ತು ಜಂಟಿ ಆಯುಕ್ತರುಗಳಿಗೆ ಹಂಚಿಕೆ ಮಾಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕಾರ್ಯನಿರ್ವಹಣಾ ಮಾರ್ಗಸೂಚಿಗಳನ್ನು ಹಾಗೂ ಕಾರ್ಯವಿಧಾನಗಳನ್ನು ನಿಗದಿಪಡಿಸಿ, ಸರ್ಕಾರದ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸೂಚನೆಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ, ಈ ಕೆಳಗಿನ ಆದೇಶವನ್ನು ಹೊರಡಿಸಲಾಗಿದೆ.

ಅ. 'ಗೌಪ್ಯ ಸೇವಾ ನಿಧಿ' (Secret Services Fund) ಯನ್ನ ನಿರ್ವಹಿಸುವ ಕಾರ್ಯವಿಧಾನ :

1. ಸರ್ಕಾರದ ಉಲ್ಲೇಖಿತ ಆದೇಶದನ್ವಯ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಜಾರಿ ಮತ್ತು ಜಾಗೃತಿ ಚಟುವಟಿಕೆಗಳನ್ನು ನಡೆಸುವ ಸಮಯದಲ್ಲಿ ಅನಿರೀಕ್ಷಿತವಾಗಿ ಉದ್ಭವಿಸುವ ವೆಚ್ಚಗಳಾದ ಪ್ರಯಾಣ ವೆಚ್ಚ, ಲೇಖನ ಸಾಮಗ್ರಿಗಳ ಖರೀದಿ, ಖಾಸಗಿ ವಾಹನಗಳನ್ನು ಬಾಡಿಗೆಯ ಮೇಲೆ ಪಡೆಯಲು ಮತ್ತು ಇತರೆ ಸಂಬಂಧಿತ ವೆಚ್ಚಗಳನ್ನು ಭರಿಸಲು ಹಾಗೂ ತೆರಿಗೆ ವಂಚನೆಯ ಸುಳಿವು ನೀಡುವ ಮಾಹಿತಿದಾರರಿಗೆ ಬಹುಮಾನ ನೀಡುವ ವೆಚ್ಚವನ್ನು ಭರಿಸಲು 'ಗೌಪ್ಯ ಸೇವಾ ನಿಧಿ' (Secret Services Fund) ಯನ್ನು ಕಾರ್ಯಗತಗೊಳಿಸಲಾಗಿದೆ.
2. 'ಗೌಪ್ಯ ಸೇವಾ ನಿಧಿ' ಯನ್ನು ಜಾರಿ ಮತ್ತು ಜಾಗೃತಿ ವಿಭಾಗಗಳ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು / ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರುಗಳ ಸುಪರ್ಧಿಯಲ್ಲಿ ಇರಿಸಲಾಗುವುದು ***(ಇನ್ನು ಮುಂದೆ ಇಲ್ಲಿ 'ಜಾರಿಗೊಳಿಸುವ ಪ್ರಾಧಿಕಾರ'ಗಳೆಂದು ಉಲ್ಲೇಖಿಸಲಾಗುವುದು).***
3. 'ಗೌಪ್ಯ ಸೇವಾ ನಿಧಿ'ಗಾಗಿ ಜಾರಿಗೊಳಿಸುವ ಪ್ರಾಧಿಕಾರಗಳು ತಮ್ಮ ಕಛೇರಿಯ ಟ್ಯಾನ್ (TAN) ಅನ್ನು ಉಪಯೋಗಿಸಿ, ಕಛೇರಿಯ ಅಧಿಕೃತ ಹೆಸರಿನಲ್ಲಿ **ಭಾರತೀಯ ಸ್ಟೇಟ್ ಬ್ಯಾಂಕ್**ನಲ್ಲಿ ಒಂದು ಜಂಟಿ ಉಳಿತಾಯ ಖಾತೆಯನ್ನು ತೆರೆಯತಕ್ಕದ್ದು. ಈ ಜಂಟಿ ಉಳಿತಾಯ ಖಾತೆಯನ್ನು ತಮ್ಮ ವಿಭಾಗದ ಕೇಂದ್ರಸ್ಥಾನದಲ್ಲಿ ತೆರೆಯತಕ್ಕದ್ದು ಹಾಗೂ ಈ ಖಾತೆಗೆ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು ಕಛೇರಿಯ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂದ್ರ ಕಛೇರಿ) ಅಥವಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ / ಜಾಗೃತಿ) ಕಛೇರಿಗಳ ವಾಣಿಜ್ಯ ತೆರಿಗೆ ಅಧಿಕಾರಿ (ಪತ್ರಾಂಕಿತ ವ್ಯವಸ್ಥಾಪಕರು) ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು ಎರಡನೇ ಸಹಿ ಮಾಡುವ ಅಧಿಕಾರಿಯಾಗಿರುತ್ತಾರೆ. ಈ ಎರಡನೇ ಸಹಿ ಮಾಡುವ ಅಧಿಕಾರಿಯನ್ನು ಸಂಬಂಧಿಸಿದ ಜಾರಿ ಅಥವಾ ಜಾಗೃತಿ ವಿಭಾಗಗಳ ಜಂಟಿ ಆಯುಕ್ತರುಗಳು ನಿರ್ಧರಿಸಿದಂತೆ ನಿಯೋಜಿಸತಕ್ಕದ್ದು.
4. ಈ ರೀತಿ ತೆರೆದ ಉಳಿತಾಯ ಖಾತೆಯನ್ನು 'ಗೌಪ್ಯ ಸೇವಾ ನಿಧಿ' ಯ ಉಪಯೋಗಕ್ಕಾಗಿ ಮಾತ್ರ ಬಳಸತಕ್ಕದ್ದು ಹಾಗೂ ಈ ಖಾತೆಯಲ್ಲಿ ವೈಯಕ್ತಿಕ ವಹಿವಾಟನ್ನಾಗಲೀ ಅಥವಾ ಇನ್ಯಾವುದೇ ವಹಿವಾಟನ್ನಾಗಲೀ ನಡೆಸತಕ್ಕದ್ದಲ್ಲ. ವರ್ಗಾವಣೆ / ನಿವೃತ್ತಿ ಅಥವಾ ಇನ್ಯಾವುದೇ ಅನಿವಾರ್ಯ ಕಾರಣಗಳಿಂದ ಒಬ್ಬ ಅಧಿಕಾರಿಯು ಈ ಜಂಟಿ ಉಳಿತಾಯ ಖಾತೆಯನ್ನು ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ, ಆ ಅಧಿಕಾರಿಯು ಈ ವಿಚಾರವನ್ನು ಬ್ಯಾಂಕಿನ ಗಮನಕ್ಕೆ ತರತಕ್ಕದ್ದು ಹಾಗೂ ಇವರ ಉತ್ತರಾಧಿಕಾರಿಯ ಮಾದರಿ ಸಹಿಗಳನ್ನು ಬ್ಯಾಂಕಿಗೆ ಒದಗಿಸಿ, ಸದರಿ ಉತ್ತರಾಧಿಕಾರಿಯು ಜಂಟಿ ಖಾತೆಯನ್ನು ಮುಂದುವರೆಸಿ ನಿರ್ವಹಣೆ ಮಾಡತಕ್ಕದ್ದು.
5. ಪ್ರತೀ ಆರ್ಥಿಕ ವರ್ಷದ ಪ್ರಾರಂಭದಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರು ಸೂಕ್ತ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಇದಕ್ಕಾಗಿ ಅನುದಾನವನ್ನು ಒದಗಿಸಲಿದ್ದು, ಜಾರಿಗೊಳಿಸುವ ಪ್ರಾಧಿಕಾರಗಳು ಈ ರೀತಿ ಹಂಚಿಕೆ ಮಾಡಲಾದ ಅನುದಾನವನ್ನು ಖಜಾನೆಯಿಂದ ಸೆಳೆದು ಜಂಟಿ ಉಳಿತಾಯ ಖಾತೆಯಲ್ಲಿ ಜಮೆ ಮಾಡತಕ್ಕದ್ದು ಹಾಗೂ ಮೇಲೆ ತಿಳಿಸಲಾದ ವೆಚ್ಚಗಳನ್ನು ಈ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಉಳಿತಾಯ ಖಾತೆಯಿಂದ ಭರಿಸತಕ್ಕದ್ದು.
6. ಜಾರಿಗೊಳಿಸುವ ಪ್ರಾಧಿಕಾರಗಳು ಜಾರಿ ಮತ್ತು ಜಾಗೃತಿ ಕಾರ್ಯಗಳ ಸಂದರ್ಭದಲ್ಲಿ ಉದ್ಭವಿಸುವ ಅನಿರೀಕ್ಷಿತ ವೆಚ್ಚಗಳಾದ ಪ್ರಯಾಣ ವೆಚ್ಚ, ಲೇಖನ ಸಾಮಗ್ರಿಗಳ ಖರೀದಿ, ಖಾಸಗಿ ವಾಹನಗಳನ್ನು ಬಾಡಿಗೆಯ ಮೇಲೆ ಪಡೆಯುವ ವೆಚ್ಚ ಹಾಗೂ ಇತರೇ ಸಂಬಂಧಿತ ವೆಚ್ಚಗಳನ್ನು ರೂ.50,000-00 ಗಳ